ತುಂಬುತ್ತಿದ್ದವು. ಅಂದು ತನಗೆ ತುಂಬಾ ಮಾತನಾಡಬೇಕೆನಿಸಿತ್ತು. ಇನ್ನು ಮುಂದೆ ತಾನು ಅವಳೊಂದಿಗೆ ಮಾತ್ರ ಇರುತ್ತೇನೆ. ಸಾಯುವ ತನಕ ಅವಳನ್ನು ನೋಡುತ್ತಲೇ ಇರಬೇಕು. ಯಾರಿಗೆ ಬೇಕಾದರೂ ತನ್ನನ್ನು ಪರಿಹಾಸ ಮಾಡಬಹುದು. ಆದರೆ, ಅವಳನ್ನು ನೋಡುತ್ತಾ ಇದ್ದರೆ ತನಗೆ ಯಾವತ್ತೂ ಬೇಸರವಾಗುವುದಿಲ್ಲ – ಹಾಗೆ ಏನೇನೋ... ಏನೇನೋ ಹೇಳಬೇಕೆನಿಸಿತ್ತು. ತಾನು ಅವಳ ಕೈ ಬೆರಳುಗಳನ್ನು ಹಿಡಿದು ಹೇಳಲು ತುಂಬಾ ಪ್ರಯತ್ನಿಸಿದ್ದೆ. ಆದರೆ, ಮಾತುಗಳು ಹೊರ ಬಂದಿರಲಿಲ್ಲ.

'ಪರವಾಗಿಲ್ಲ ಹೋಗಲಿ, ಮೂಗ. ನೀನು ಏನು ಹೇಳಬೇಕೆಂದಿರುವೆಯೋ ಅದೆಲ್ಲಾ ನಂಗೊತ್ತು' ಅದೂ ನಿಜವೇ ಇರಬೇಕು. ತಾನು ಯೋಚಿಸುವ ಮೊದಲೇ ತನ್ನ ಆಶೋತ್ತರಗಳನ್ನು ಅವಳು ಅರ್ಥ ಮಾಡಿಕೊಳ್ಳುವುದುಂಟು. ಕಳೆದ ವರ್ಷ ಮಳೆಗಾಲದಲ್ಲಿ ತನಗೆ ಆಕೆ ಒಂದು ಬೆಡ್‌ಶೀಟ್ ತಂದುಕೊಟ್ಟಿದ್ದಳು.

'ಇದು ನಮ್ಮಪ್ಪಂದು. ಅಪ್ಪ ಹೊಸದನ್ನು ಕೊಂಡಿದ್ದಾರೆ' ಎಂದು ಹೇಳುತ್ತಾ ಅವಳು ಅದನ್ನು ನನ್ನ ಕಾಲಬುಡದಲ್ಲಿ ಹಾಕಿದ್ದಳು. ದೊಡ್ಡಮ್ಮನಿಗೆ ಗೊತ್ತಾದರೆ ಅವಳ ಮೇಲೆ ಕೋಪ ಮಾಡಿಕೊಳ್ಳುತ್ತಾರೆಂಬುದು ತನಗೆ ಗೊತ್ತಿತ್ತು. ಹಾಗೆ ನೋಡಿದರೆ, ದೊಡ್ಡಮ್ಮ ಕೋಪ ಮಾಡಿಕೊಳ್ಳುವುದರಲ್ಲಿ ಅಚ್ಚರಿಯೇನೂ ಇಲ್ಲ. ಅವಳು ದೊಡ್ಡಮ್ಮನ ಮಗಳಲ್ಲವಲ್ಲ. ಶಂಕುಣ್ಣಿ ನಾಯರ್ ಅವರ ಮೊದಲ ಹೆಂಡತಿಯ ಮಗಳು. ತನಗೂ ತಾಯಿಲ್ಲ, ಅವಳಿಗೂ ಇಲ್ಲ. ಬಹುಶಃ ಅದಕ್ಕೇ ಇರಬೇಕು ತಾನು ಅವಳು ಕೆಲವು ಸಂಜೆ, ಅಂಗಳದಲ್ಲಿ ಕುಳಿತಿರುವಾಗ ಸದ್ದಾಗದಂತೆ ಅವಳು ಅಳುತ್ತಿದ್ದುದು. ತಾನೂ ಅಳುತ್ತೇನೆ. ಗಟ್ಟಿಯಾಗಿ ಅತ್ತರಷ್ಟೆ ದೊಡ್ಡಮ್ಮ ಕೋಪಿಸಿಕೊಳ್ಳುವುದು. ಇಲ್ಲವೆಂದಾದರೆ ಗೊತ್ತಾಗುವುದೇ ಇಲ್ಲ. ಒಮ್ಮೆ ತಾನು ಅಳತೊಡಗಿದಾಗ ಅವಳು ಹೇಳಿದಳು, ಮೂಗಾ, ನೀನು ಈಗ ಮಗುವೇನೂ ಅಲ್ಲ. ಹೀಗೆ ಅಳತ್ತಾ ಇದ್ದರೆ ಜನ ಗೇಲಿ ಮಾಡಿ ನಗುತ್ತಾರೆ.' ಅದರ ನಂತರ ತಾನು ಹೆಚ್ಚಾಗಿ ಅಳುತ್ತಿರಲಿಲ್ಲ. ತಾನು ಹೆಚ್ಚು ಹೆಚ್ಚು ಬೆಳೆಯುತ್ತಿದ್ದೇನೆ. ಈಗಲೇ ತಾನು ಶಂಕುಣ್ಣಿ ನಾಯರ್ ಎತ್ತರಕ್ಕೆ ಬೆಳೆದಿದ್ದೇನೆ.

'ನೀನು ಇನ್ನೂ ಬೆಳಿತೀಯ. ಸರಿಯಾದ ಗಂಡಸಾಗ್ತಿಯ' ಅವಳು ಆಗಾಗ ಹೇಳುತ್ತಿರುತ್ತಾಳೆ. ಅವಳು ಹಾಗೆ ಸೂಕ್ಷ್ಮವಾಗಿ ನೋಡುವಾಗ ತಾನು ತಲೆ ತಗ್ಗಿಸುವುದುಂಟು. ಉಳಿದ ಯಾರ ಮುಂದೆಯೂ ತನಗೆ ನಾಚಿಕೆಯೆನಿಸುವುದಿಲ್ಲ. ಆದರೆ, ಅವಳ ಮುಂದೆ ಮಾತ್ರ...

'ಏನೋ ಮೂಗ, ಚಹದ ಪುಡಿ ಬೇಕಿತ್ತಾ?'

ಅಂಗಡಿಯವನ ಧ್ವನಿ ಕೇಳಿಸಿಕೊಂಡಾಗ ಮೂಗ ಯೋಚನೆಯಿಂದ ಎಚ್ಚರಗೊಂಡ. ಹಾದಿ ಚೆನ್ನಾಗಿ ಗೊತ್ತಿರುವುದರಿಂದ ಏನೇ ಯೋಚಿಸುತ್ತಾ ನಡೆದರೂ ತಲುಪದೇ ಇರುವುದಿಲ್ಲ. ಒಮ್ಮೆ ಮಾತ್ರ ತಾನು ದಾರಿ ತಪ್ಪಿದ್ದೇನೆ. ಅದು ಭಗವತಿ ದೇವಾಲಯದ ಮುಂದೆ, ಮೂರು ರಸ್ತೆ ಸೇರುವಲ್ಲಿ. ಅಲ್ಲಿ ದಾರಿ ತಪ್ಪದಿರುವವರೇ ಇಲ್ಲವಲ್ಲ. ಅಂದು ತಾನೂ ಅರ್ಧ ಗಂಟೆ ನಡೆಯುವಷ್ಟರಲ್ಲಿ...

'ಮೂಗಾ, ನಿನ್ನ ಮನೆಯಲ್ಲಿ ನೆಂಟರು ಬಂದಿದ್ದಾರೆ ಅಲ್ವಾ? ಯಾವಾಗ ಸ್ವಯಂವರ?'

'?' ಮೂಗ ತಲೆಯೆತ್ತಿ ನೋಡಿದ.

'ಜಾನುವಿನ ಮದುವೆ ಯಾವಾಗಂದೆ?'

ಅಂಗಡಿಯವನು ಸದಾ ತನ್ನನ್ನು ಹಾಸ್ಯ ಮಾಡುತ್ತಿರುತ್ತಾನೆ. ಜಾನು ಮದುವೆಯಾಗುವುದುಂಟೆ? ಹಾಗಿದ್ದರೂ ತನಗೆ ಗೊತ್ತಿಲ್ಲದಿರುತ್ತದೆಯೆ? ತಾನಲ್ಲವೆ ಅವಳ ಮದುವೆ